**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ</u>**

**<u>ಸಿ.ಸಿ.ನಂಬರ್:979/2022</u>**

ಸಿಡಬ್ಲ್ಯೂ: 3
ಪಿಡಬ್ಲ್ಯೂ: 3

| | | |
|---|---|---|
| ಸಾಕ್ಷಿಯ ಹೆಸರು | : | ಆನಂದ |
| ತಂದೆಯ ಹೆಸರು | : | ಕೆ.ಸುಂದರ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಗಬಗಲ್, ಮೂಡಿಗೆರೆ |

ಇಂದು ದಿನಾಂಕ:31.05.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆ:</u>** ಮಾನ್ಯ ಎಪಿಪಿಯವರಿಂದ:

ಆರೋಪಿಯ ಪರಿಚಯ ನನಗೆ ಇದೆ. ಸಾಕ್ಷಿಯು ನಿಪಿ-3 ಪಂಚನಾಮೆಯ ಮೇಲೆ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಒಂದು ವರ್ಷದ ಹಿಂದೆ ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ನಾನು ಮತ್ತು ಚಾಸಾ 2 ರವರು ಮಾಡಿರುತ್ತೇವೆ ಅದರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-4 ಫೋಟೋವನ್ನು ನೋಡಿ ಗುರುತಿಸಿ ಅದರಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ. ಸದರಿ ಫೋಟೋವನ್ನು ಪೋಲಿಸರು ಎಲ್ಲಿ, ಏಕೆ ಮತ್ತು ಯಾವ ಉದ್ದೇಶಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂಓ-1 ರ ಮೇಲಿನ ತಮ್ಮ ಸಹಿಯನ್ನುನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ಎಂಓ-1(ಸಿ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಆ ಕುರಿತು ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು:</u>** ಮಾನ್ಯ ಎಪಿಪಿಯವರಿಂದ:

1. ಸಾಕ್ಷಿಗೆ ಅವರ ಹೇಳಿಕೆಯ ಭಾಗವಾದ, "ದಿನಾಂಕ:16.05.2022 ರಂದು ------ನನ್ನ ಸಹಿ ಮಾಡಿರುತ್ತೇನೆ" ಎಂಬ ಭಾಗವನ್ನು ಸಾಕ್ಷಿಗೆ ಸಂಪೂರ್ಣವಾಗಿ ಓದಿ ಹೇಳಿ ತಿಳಿಸಲಾಗಿ ಸಾಕ್ಷಿಯು ಸದರಿ ಹೇಳಿಕೆಯ ಭಾಗವನ್ನು ತಿರಸ್ಕರಿಸಿರುತ್ತಾರೆ. ಸದರಿ ತಿರಸ್ಕರಿಸಿದ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-2 ರ ಸಂಪೂರ್ಣ ಸಂಗತಿಗಳನ್ನು ಓದಿ ಹೇಳಲಾಗಿ ಸಂಪೂರ್ಣವಾಗಿ ತಿರಸ್ಕರಿಸಿರುತ್ತಾರೆ. ನನ್ನ ಸಮಕ್ಷಮ ನಿಪಿ-1 ರಂತೆ ಪಂಚನಾಮೆ ಮಾಡಿ, ನ್ಯಾಯಾಲಯದ ಮುಂದೆ

ಇರುವ ಎಂಒ-1 ರಲ್ಲಿರುವ 49 ಟೆಟ್ರಾ ಪ್ಯಾಕೆಟ್ಟುಗಳನ್ನು ಆರೋಪಿಯ ವಶದಿಂದ ಜಪ್ತು ಮಾಡಿಕೊಂಡಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಪಂಚನಾಮೆಗೆ ಹಾಜರಾಗುವಂತೆ ನೋಟಿಸು ನೀಡಿದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ